ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ೫ರಿಂದ ೧೦ರ ಪರೆಗೆ (ಎರಡೂ ಸೇರಿದಂತೆ) ಖಂಡಗಳು ವಿಧೇಯಕದ ಅಂಗವಾದವು:

ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು.—ಪ್ರಸ್ತಾಪ ಹೀಗಿದೆ:

"ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಯಿತು.

ಪ್ರಸ್ತಾಪದ ಅಂಗೀಕಾರ

ಶ್ರೀ ಅಬ್ದುಲ್ ನಜೀರ್ ಸಾಬ್.—೧೯೮೩ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕವನ್ನು ಅಂಗೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ.—೧೯೮೩ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇದ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೈಸೂರು, ಬೆಂಗಳೂರು ಮತ್ತು ತುಮಕೂರಿನಲ್ಲಿ ಪೋಲೀಸ್ ಫೈರಿಂಗ್ ನಡೆದುದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಅದು ನಿನ್ನೆಯಿಂದ ಪೋಸ್ಟ್ ಪೋನ್ ಆಗುತ್ತಿದೆ.

ಅಧ್ಯಕ್ಷರು.—ಅದನ್ನು ನಂತರ ತೆಗೆದುಕೊಳ್ಳೋಣ. ಈಗ ವಿಧೇಯಕದ ಮುಂದೆ ಆಗಲಿ.

೧೯೮೩ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಅಬ್ದುಲ್ ನಜೀರ್ ಸಾಬ್.—(ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಕ ಮುಂಶಿಗಳು).—ಮಾನ್ಯ ಅಧ್ಯಕ್ಷರೆ, ೧೯೮೩ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಿ. ಎಂ. ಕಾನಡೆ.—ಸಂವಿಧಾನದಲ್ಲೇ ಹೀ ಗಾದರೆ ಹೊರಗಡೆ ಹೇಗೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಶಾಸನ ಸಭೆಯಲ್ಲಿ ಅಂಗೀಕೃತವಾದ ವಿಧೇಯಕವನ್ನು ಜಾರಿಗೆ ತೊಡುವಾಗ ಕೆಲವು ಆಡಳಿತಾತ್ಮಕ ನ್ಯೂನತೆಗಳನ್ನು ಗಮನಿಸಿ ಸುಗ್ರೀವಾಜ್ಞೆ ಮುಖಾಂತರ ಕೆಲವು ತಿದ್ದುಪಡಿಗಳನ್ನು ಜಾರಿಗೆ ತೊಟ್ಟಿದ್ದೇವೆ. ಅದನ್ನು ಈಗ ಈ ತಿದ್ದುಪಡಿಯ ಮೂಲಕ ಶಾಶ್ವತವಾಗಿ ಮಾಡಿದ್ದೇವೆ. ಸ್ಟೇಟ್‌ಮೆಂಟ್ ಮತ್ತು ಆಬ್ಜೆಕ್ಟ್ಸ್ ಮತ್ತು ರೀಸನ್ಸ್‌ನಲ್ಲಿ ಏನು ಹೇಳಿದ್ದೇವೆ ಅದರ ಪ್ರಕಾರ ಸೆಕ್ಷನ್ ೫ನ್ನು ಅಮೆಂಡ್ ಮಾಡಿದ್ದೇವೆ. ಹಿಂದಿನ ಸೆಕ್ಷನ್ ಪ್ರಕಾರ ೨೫ ಗಂಟೆಯೊಳಗೆ ಜಾತಿ ಪ್ರಮಾಣ ಪತ್ರವನ್ನು ನಿಲ್ಲಿಸಬೇಕೆಂದಿರುವುದನ್ನು ೪೮ ಗಂಟೆಯೊಳಗೆ ನಿಲ್ಲಿಸ ಬೇಕೆಂದು ಮಾಡಿದ್ದೇವೆ. ಸೆಕ್ಷನ್ ೪೮ರಲ್ಲಿ ಅಸಿಸ್ಟೆಂಟ್ ಕಮೀಷನರ್‌ಗೆ ಅಧಿಕಾರ ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಇದ್ದ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ, ಏಕೆಂದರೆ ಒಂದೊಂದು ತಾಲ್ಲೂಕಿನಲ್ಲಿ

೧೦-೨೦ ಮಂಡಲಗಳು ಬರುವುದರಿಂದ ಜಿಲ್ಲಾಧಿಕಾರಿಗಳಿಗಿದ್ದ ಅಧಿಕಾರವನ್ನು ಆಸಿಸ್ಟೆಂಟ್ ಕಮೀಷನರ್ ವರ್ಗಾವಣೆ ಮಾಡಿದ್ದೇವೆ. ೧೫ನೇ ಸೆಕ್ಷನ್‌ನಲ್ಲಿ ತಾಲ್ಲೂಕು ಸಮಿತಿ ಎಂದು ಇರುತ್ತದೆ. ಅದರ ವೆಚ್ಚವನ್ನು ಯಾರು ಕೊಡಬೇಕೆಂಬ ವಿವರ ಇರಲಿಲ್ಲ. ತಾಲ್ಲೂಕು ಸಮಿತಿಯ ವೆಚ್ಚವನ್ನು ಕೊಡತಕ್ಕದು ಜಿಲ್ಲಾಪರಿಷತ್ತು ಎಂಬ ತಿದ್ದುಪಡಿಯನ್ನು ತಂದಿದ್ದೇವೆ. ೧೪೮ನೇ ಸೆಕ್ಷನ್‌ನಲ್ಲಿ ಎಲೆಕ್ಟರಲ್ ರೋಲ್ ಪ್ರತ್ಯೇಕವಾಗಿರಬೇಕೆಂದು ಹೇಳಿತ್ತು. ಆದರೆ ಅದನ್ನು ಪ್ರಿಂಟ್ ಮಾಡುವುದಕ್ಕೆ ಲಕ್ಷಾಂತರ ರೂಪಾಯಿಗಳ ಹಣ ಬೇಕಾಗುತ್ತದೆಂದು ಗೊತ್ತಾದ ಕಾರಣ, ಅಸೆಂಬ್ಲಿ ಮತ್ತು ಪಾರ್ಲಿಮೆಂಟಿಗೆ ಏನು ಎಲೆಕ್ಟರಲ್ ರೋಲ್ ಮಾಡುತ್ತಾರೆ ಅದರಲ್ಲಿ ೧೮ ವರ್ಷ ವಯಸ್ಸಿನವರನ್ನು ಸೇರಿಸಿ ಮಾಡುವುದು, ಅದನ್ನೇ ರಿವೈಸ್ ಮಾಡತಕದ್ದು ಎಂಬುದನ್ನು ಈ ಶಾಸನದಲ್ಲಿ ಆಳವಡಿಸಿದ್ದೇವೆ. ಚುನಾವಣೆಯಲ್ಲಿ ಯಾರು ಜಿಲ್ಲಾಪರಿಷತ್ತಿಗೆ ಸ್ಪರ್ಧೆ ಮಾಡುತ್ತಾರೆ ಅವರೇ ಚುನಾವಣಾ ವೆಚ್ಚವನ್ನು ಕೊಡತಕ್ಕದು ಎಂದು ಮಾಡಿದ್ದೇವೆ. ಮೊದಲನೇ ಶಾಸನದಲ್ಲಿ one Deputy Secretary ಎಂದು ಹೇಳಿದ್ದೆವು; ಈಗ one or more ಎಂದು ಮಾಡಿದ್ದೇವೆ. ಅದರಲ್ಲಿ ಡೆವಲಪ್‌ಮೆಂಟ್ ಸೆಕ್ರೆಟರಿ ಇರಬಹುದು. ಜಿಲ್ಲಾ ಪರಿಷತ್ ಸರ್ವೀಸ್ ಕಮಿಷನ್ ಮಾಡಬೇಕೆಂದು ಮಾಡಿದ್ದೇವೆ. ಪಬ್ಲಿಕ್ ಸರ್ವಿಸ್ ಕಮಿಷನ್ ಇರುವ ಹಾಗೆ ಇನ್ನು ಮುಂದೆ ಆಗತಕ್ಕ ಎಲ್ಲಾ ನೇಮಕಾತಿಯೂ ಆ ಒಂದು ಸರ್ವೀಸ್ ಮೂಲಕ ಆಗಬೇಕೆಂದು ಅದನ್ನು ತಿದ್ದುಪಡಿಯಲ್ಲಿ ಸೇರಿಸಿದ್ದೇವೆ. ೧೭೭ನೇ ಸೆಕ್ಷನ್ ಪ್ರಕಾರ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿ ಏನಿರುತ್ತಾರೆ ಅವರು ಎಲ್ಲಾ ಕಮಿಟಿಗಳಿಗೆ ಕಾರ್ಯದರ್ಶಿ ಆಗತಕ್ಕ ಅಧಿಕಾರ ಇತ್ತು. ಹಾಗೆ ಮಾಡುವುದಕ್ಕಾಗುವುದಿಲ್ಲ. ಅದನ್ನು ಅಮೆಂಡ್ ಮಾಡುತ್ತೇವೆಂದು ಕೂಡ ಭರವಸೆ ಕೊಟ್ಟಿದೆ. ಈಗ ಆದರ ಪ್ರಕಾರ ಮಾಡಿದ್ದೇವೆ. ಡೆಪ್ಯೂಟಿ ಸೆಕ್ರೆಟರಿಗಳು ಬೇರೆ ಉಪಸಮಿತಿಗಳಿಗೆ ಕಾರ್ಯದರ್ಶಿ ಆಗಿರಬೇಕೆಂದು ಮಾಡಿದ್ದೇವೆ. ೧೭೬ನೇ ಸೆಕ್ಷನ್ ೧೭೮ರಲ್ಲಿ ಪ್ಲಾನಿಂಗ್ ಡೆವಲಪಮೆಂಟ್ ಕಮಿಟಿಯ ಅಧಿಕಾರ ಏನು ಎಂಬುದನ್ನು ಹೇಳಿದ್ದೇವೆ. ೧೭೬ನೇ ಸೆಕ್ಷನ್ ೧೮೮ರಲ್ಲಿ ಫೈನಾನ್ಸಿಯಲ್ ಬಡ್ಜೆಟ್ ಅಕೌಂಟ್ ಮಾಡಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಇರಬೇಕೆಂಬುದನ್ನು ನಿಗದಿ ಮಾಡಿದ್ದೇವೆ. ವಿತ್ತೀಯ ಆಯೋಗದಲ್ಲಿ ಮಂಡಲಪಂಚಾಯಿತ್ ಎಂಬ ಪದ ಬಿಟ್ಟುಹೋಗಿತ್ತು. ಆದಕ್ಕೆ ಜಿಲ್ಲಾ ಪರಿಷತ್ ಮತ್ತು ಮಂಡಲಪಂಚಾಯಿತ್ ಎಂದು ಹೇಳಿ ತಿದ್ದುಪಡಿಯನ್ನು ತಂದಿದ್ದೇವೆ. ನಿಯಮಾವಳಿಗಳಲ್ಲಿ ಸರ್ಕಾರದ ಸೇವಾ ನಿಯಮಾವಳಿಯಲ್ಲಿ ಈ ಏಕರೂಪದ ಶಾಸನ ತರಬೇಕೆಂದು ಮಾಡತಕ್ಕ ಬಗ್ಗೆ ಇದೆ. ಇಪತ್ತು ಕೆಲಸ ಮಾಡಲು ಅಧಿಕಾರಿಗಳನ್ನು ನೇಮಕ ಮಾಡಬೇಕು. ಕಾನೂನು ಪ್ರಕಾರ ಪೋಸ್ಟ್ ಕ್ರಿಯೇಟ್ ಮಾಡದೇ ಅಧಿಕಾರ ವಹಿಸಕ್ಕಾಗುವುದಿಲ್ಲ. ಆ ಒಂದು ಅಧಿಕಾರವನ್ನು ತೆಗೆದು ಕೊಳ್ಳತಕ್ಕ ಶಾಸನ ಮಾಡಿದ್ದೇವೆ. ಕಾಯ್ದೆಯನ್ನು ಜಾರಿಗೆ ಕೊಡತಕ್ಕ ಕಾಲದಲ್ಲಿ ಬರಬಹುದಾದ ನ್ಯೂನ್ಯತೆಗಳಿಗೆ ತಿದ್ದುಪಡಿಯನ್ನೂ ತಂದಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಈ ಮಸೂದೆಯನ್ನು ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಇದೇನು ಮಾನ್ಯ ನಜೀರ್ ಸಾಬ್ ಅವರು ಪ್ಯಾರಲಲ್ ಗೌರ್ನ್‌ಮೆಂಟ್ ಮಾಡುವುದಕ್ಕೆ ಹೊರಟಹಾಗಿದೆ.

ಅಧ್ಯಕ್ಷರು.—ಈ ಬಗ್ಗೆ ಚರ್ಚೆ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬಹಳ ಮಹತ್ವದ ವಿಷಯ ಈಗ ಚರ್ಚೆ ಆಗಬೇಕಾಗಿದೆ. ನಾವು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇವೆ. ಆ ಬಗ್ಗೆ ಬಹಳ ಸದಸ್ಯರು ಮಾತನಾಡುವವರು ಇದ್ದಾರೆ. ಈ ವಿಷಯ ನಿನ್ನೆಯೇ ಚರ್ಚೆಗೆ ಬರಬೇಕಾಗಿತ್ತು. ಈ ಬಿಲ್ ಮುಗಿಸಿಕೊಟ್ಟ ಮೇಲೆ ತೆಗೆದುಕೊಳ್ಳೋಣವೆಂದಿದ್ದಕ್ಕೆ ನಾವು ಬಿಲ್ ಮುಗಿಸಿಕೊಟ್ಟಿದ್ದೇವೆ. ಈಗ ಆ ವಿಷಯವನ್ನು ತಾವು ಚರ್ಚೆಗೆ ತೆಗೆದುಕೊಳ್ಳಿ...

ಅಧ್ಯಕ್ಷರು.—ಆಗಲಿ, ಚರ್ಚೆಗೆ ತೆಗೆದುಕೊಳ್ಳೋಣ. ಚರ್ಚೆಯಲ್ಲಿ ಭಾಗವಹಿಸತಕ್ಕ ಸದಸ್ಯರು ನೇರವಾಗಿ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ ಬೇಗ ತಮ್ಮ ಭಾಷಣವನ್ನು ಮುಕ್ತಾಯ ಮಾಡಿದರೆ ಹೆಚ್ಚು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ಅವಕಾಶವಾಗುತ್ತದೆ. ಈ ವಿಷಯದ ಬಗ್ಗೆ ಸಹಿ ಮಾಡಿರುವವರಲ್ಲದೇ ಇನ್ನೂ ಹತ್ತು ಜನ ಮಾನ್ಯ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ಅಪೇಕ್ಷೆ ಪಟ್ಟಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಸಹಕರಿಸಿ ಮಾತನಾಡಬೇಕು. ಹಾಗೂ ಈ ಚರ್ಚೆ ೪.೩೦ಕ್ಕೆ ಮುಕ್ತಾಯವಾಗಬೇಕು. ೪.೩೦ಕ್ಕೆ ಮಾನ್ಯ ಮಂತ್ರಿಗಳನ್ನು ಉತ್ತರ ನೀಡಲು ಕರೆಯಲಾಗುವುದು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

(ಉಪಾಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)